ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

ಎಸ್.ಸಿ. ಸಂಖ್ಯೆ: 355/2025

ಚಾ.ಸಾ-6 ಫ್ರಾ.ಸಾ- 2

ದಿಃ 27.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಸಿ.ಆರ್.ಹೊನ್ನಯ್ಯ |
| ತಂದೆ ಹೆಸರು | ಲೇಟ್ ರಂಗೇಗೌಡ |
| ವಯಸ್ಸು | 66 ವರ್ಷ |
| ವೃತ್ತಿ | ನಿವೃತ್ತ ಪಿ.ಎಸ್.ಐ |
| ವಿಳಾಸ | ಟಿ.ನರಸೀಪುರ, ಮೈಸೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು 2018 ರಿಂದ ಜೂನ್ 2019ರವರೆಗೆ ರಾಜಗೋಪಾಲನಗರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 21.3.2019ರಂದು ಬೆಳಿಗ್ಗೆ 3.30ರ ವೇಳೆಗೆ ಚಾ.ಸಾ-1 ರವರು ನನಗೆ ಕರೆ ಮಾಡಿ ಠಾಣೆಗೆ ಬರುವಂತೆ ಸೂಚಿಸಿದ್ದರು. ಅದರಂತೆ ನಾನು ಕೂಡಲೇ ಠಾಣೆಗೆ ಹೋದಾಗ ಅಲ್ಲಿ ಚಾ.ಸಾ-1, ಚಾ.ಸಾ-5, ಚಾ.ಸಾ-7 ರಿಂದ ಚಾ.ಸಾ-10 ರವರು ಇದ್ದರು. ಆಗ ಚಾ.ಸಾ-1 ರವರು ಅವರಿಗೆ ಬಾತ್ಮಿದಾರರಿಂದ ಜಿ.ಕೆ.ಡಬ್ಲ್ಯೂ ಲೇಔಟಿನ ಮುಖ್ಯರಸ್ತೆಯ ಪಕ್ಕದಲ್ಲಿ 5-6 ಜನರು ದರೋಡೆಗೆ ಹೊಂಚುಹಾಕುತ್ತಿರುವ ಬಗ್ಗೆ ಮಾಹಿತಿ ಬಂದಿರುವುದಾಗಿ ತಿಳಿಸಿದ್ದರು.

3. ನಂತರ ಚಾ.ಸಾ-1 ರವರು ಚಾ.ಸಾ-9 ಮತ್ತು ಚಾ.ಸಾ-10 ರವರ ಮೂಲಕ ಚಾ.ಸಾ-2 ಮತ್ತು ಚಾ.ಸಾ-3 ರವರನ್ನು ಪಂಚರಾಗಿ ಸಹಕರಿಸಲು

ಠಾಣೆಗೆ ಕರೆಸಿಕೊಂಡು ಸದರಿ ಪಂಚರಿಗೆ ಆ ಬಗ್ಗೆ ನೋಟೀಸನ್ನು ನೀಡಿದ್ದರು. ಬಳಿಕ ಚಾ.ಸಾ-1 ರವರು ಪಂಚರು ಹಾಗು ಸಿಬ್ಬಂದಿಗಳನ್ನು ಕರೆದುಕೊಂಡು ಇಲಾಖಾ ವಾಹನ ಹಾಗು ದ್ವಿಚಕ್ರ ವಾಹನಗಳಲ್ಲಿ ಠಾಣೆಯಿಂದ ಹೊರಟು ಸದರಿ ಸ್ಥಳಕ್ಕೆ ನಾವೆಲ್ಲರೂ ಹೋದೆವು.

4. ನಾವು ಸಂಬಂಧಿತ ಸ್ಥಳದಿಂದ ಸ್ವಲ್ಪ ದೂರದಲ್ಲಿ ನಮ್ಮ ವಾಹನಗಳನ್ನು ನಿಲ್ಲಿಸಿದ್ದೆವು. ಆಗ ಚಾ.ಸಾ-1 ರವರು ಚಾ.ಸಾ-7ರವರಿಗೆ ಆರೋಪಿಗಳು ಇದ್ದ ಸ್ಥಳದ ಬಳಿಗೆ ಹೋಗಿ ಬಾತ್ಮಿಯನ್ನು ಖಾತ್ರಿಪಡಿಸಿ ತಿಳಿಸುವಂತೆ ಸೂಚಿಸಿದ್ದರು. ಮತ್ತು ಅವರು ಅದನ್ನು ಖಚಿತಪಡಿಸಿಕೊಂಡು ಚಾ.ಸಾ-1 ರವರಿಗೆ ವರದಿ ಮಾಡಿದರು.

5. ನಂತರ ಚಾ.ಸಾ-1 ರವರ ಸೂಚನೆಯಂತೆ ನಾವು ಸದರಿ ವ್ಯಕ್ತಿಗಳನ್ನು ಸುತ್ತುವರೆದು ಹಿಡಿಯಲು ದಾಳಿ ಮಾಡಿರುತ್ತೇವೆ. ಆ ವೇಳೆಗೆ ಸ್ಥಳದಲ್ಲಿ ಒಟ್ಟು 6 ಜನರು ಇದ್ದರು. ನಾವು ಅವರಲ್ಲಿ 4 ಜನರನ್ನು ಹಿಡಿದಿರುತ್ತೇವೆ ಮತ್ತು ಇತರ ಇಬ್ಬರು ಆರೋಪಿಗಳು ಸ್ಥಳದಿಂದ ತಪ್ಪಿಸಿಕೊಂಡು ಓಡಿಹೋಗಿರುತ್ತಾರೆ. ನಾವು ಹಿಡಿದುಕೊಂಡ ವ್ಯಕ್ತಿಗಳನ್ನು ವಿಚಾರಿಸಿ ಅವರ ಹೆಸರು ಮತ್ತು ವಿವರಗಳನ್ನು ತಿಳಿದುಕೊಂಡಿರುತ್ತೇವೆ. ನಾವು ಹಿಡಿದುಕೊಂಡ ವ್ಯಕ್ತಿಗಳ ಪೈಕಿ ಎ-3 ಸಹ ಸೇರಿರುತ್ತಾನೆ. ಅಲ್ಲದೆ ಸದರಿ ವ್ಯಕ್ತಿಗಳು ಸ್ಥಳದಿಂದ ಓಡಿಹೋದ ಆರೋಪಿಗಳ ಹೆಸರು ಮತ್ತು ವಿವರಗಳನ್ನು ತಿಳಿಸಿದ್ದರು.

6. ನಾವು ಸ್ಥಳದಲ್ಲಿ ಹಿಡಿದುಕೊಂಡ 1 ರಿಂದ 4ನೇ ಆರೋಪಿಗಳ ಬಳಿ ಒಂದು ಚಾಕು, ಒಂದು ಕಬ್ಬಿಣದ ರಾಡ್ , ಒಂದು ಮರದ ದೊಣ್ಣೆ ಮತ್ತು ಒಂದು ಖಾರದ ಪುಡಿ ಪೊಟ್ಟಣ ಕಂಡುಬಂದಿತ್ತು. ಚಾ.ಸಾ-1 ರವರು ಸ್ಥಳದಲ್ಲಿ ಮಹಜರ್ ಮಾಡಿ ಸದರಿ ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದರು. ಈಗ ನನಗೆ

ತೋರಿಸಿರುವ ದಾಖಲೆಯು ಸಂಬಂಧಿತ ಪಂಚನಾಮೆ ಆಗಿದೆ. ಇದನ್ನು ನಿ.ಪಿ-1 ಎಂದು ಈಗಾಗಲೆ ಗುರುತಿಸಲಾಗಿದೆ. ಇದರಲ್ಲಿ ನನ್ನ ಸಹಿ ಇದೆ.

7. ಮಹಜರ್ ಕಾಲಕ್ಕೆ ಅಮಾನತುಪಡಿಸಿಕೊಂಡ ಸ್ವತ್ತುಗಳನ್ನು ಗುರುತಿಸಬಲ್ಲೆ. ಸಂಬಂಧಿತ ಸ್ವತ್ತುಗಳು ಎಂದು ಗುರುತಿಸಿರುವ ಚಾಕು, ರಾಡ್, ದೊಣ್ಣೆ ಮತ್ತು ಖಾರದ ಪುಡಿ ಪೊಟ್ಟಣವನ್ನು ಕ್ರಮವಾಗಿ ಮು.ಮಾ-1 ರಿಂದ ಮು.ಮಾ-4 ಎಂದು ಮೂಲ ಪ್ರಕರಣ ಎಸ್.ಸಿ. ಸಂಖ್ಯೆ 1215/2022 ರಲ್ಲಿ ಈಗಾಗಲೇ ಗುರುತಿಸಲಾಗಿದೆ.

8. ನಂತರ ನಾವು 1 ರಿಂದ 4ನೇ ಆರೋಪಿಗಳು ಹಾಗು ಅಮಾನತುಪಡಿಸಿಕೊಂಡ ಸ್ವತ್ತುಗಳೊಂದಿಗೆ ಠಾಣೆಗೆ ಬಂದಿದ್ದೆವು. ಅಲ್ಲಿ ಚಾ.ಸಾ-1 ರವರು ಮುಂದಿನ ಕ್ರಮಕ್ಕಾಗಿ ಒಂದು ವರದಿಯನ್ನು ಸಲ್ಲಿಸಿದ್ದರು. ಈಗ ನನಗೆ ತೋರಿಸಿರುವ ದಾಖಲೆಯು ಸಂಬಂಧಿತ ವರದಿಯ ದೃಢೀಕೃತ ನಕಲಾಗಿದೆ. ಇದನ್ನು ನಿ.ಪಿ-3 ಎಂದು ಗುರುತಿಸಲಾಯಿತು. ದಾಳಿ ವೇಳೆಗೆ ನಾವು ಸ್ಥಳದಲ್ಲಿ ಹಿಡಿದಿದ್ದ ಆರೋಪಿಗಳನ್ನು ಗುರುತಿಸಬಲ್ಲೆ.

<u>ಪಾಟಿಸವಾಲುಃ ಶ್ರೀ ಎಂ.ಕೆ., 3ನೇ ಆರೋಪಿ ಪರ ವಕೀಲರಿಂದಃ</u>

9. ದಿಃ 21.3.2019ರಂದು ನಾನು ಚಾ.ಸಾ-1 ರವರ ಕರೆಯ ಮೇರೆಗೆ ಠಾಣೆಗೆ ಬಂದು ಕರ್ತವ್ಯಕ್ಕೆ ಹಾಜರಾಗಿದ್ದೆ. ಜಿ.ಕೆ.ಡಬ್ಲ್ಯೂ ಲೇಔಟಿನ ಮುಖ್ಯರಸ್ತೆಯು ದಿನದ ಎಲ್ಲಾ ವೇಳೆಯಲ್ಲಿಯೂ ಜನರು ಓಡಾಡುವ ಸ್ಥಳವಾಗಿದೆ ಎಂದರೆ ಸರಿಯಲ್ಲ. ಅದು ಮುಖ್ಯರಸ್ತೆ ಆಗಿರುವ ಕಾರಣದಿಂದ ಸದರಿ ರಸ್ತೆಯ ಅಕ್ಕಪಕ್ಕದಲ್ಲಿ ಪೊದೆಗಳು ಇದ್ದಿರಲಿಲ್ಲ ಎಂದರೆ ಸರಿಯಲ್ಲ.

10. ನಾವು ಸ್ಥಳಕ್ಕೆ ಹೋದ ಬಳಿಕ ನಾನು ಸುಮಾರು 20 ಅಡಿ ದೂರದಿಂದ

ಆರೋಪಿಗಳನ್ನು ಗಮನಿಸಿದ್ದೆ. ಆ ವೇಳೆಗೆ ಯಾವ ವ್ಯಕ್ತಿ ಮಾತನಾಡುತ್ತಿದ್ದರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. 1 ರಿಂದ 4ನೇ ಆರೋಪಿಗಳು ಯಾವುದೇ ವಸ್ತುವನ್ನು ಹೊಂದಿರಲಿಲ್ಲ ಮತ್ತು ಮು.ಮಾ-1 ರಿಂದ ಮು.ಮಾ-4 ರಲ್ಲಿ ಗುರುತಿಸಿರುವ ಸ್ವತ್ತುಗಳನ್ನು ಆರೋಪಿಗಳಿಂದ ಅಮಾನತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ ಮು.ಮಾ-4 ರಲ್ಲಿ ಗುರುತಿಸಿರುವ ರೀತಿಯ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ನಿಜ.

11. ನಾವು ಚಾ.ಸಾ-2 ಮತ್ತು ಚಾ.ಸಾ-3 ರವರನ್ನು ದಾಳಿ ಸಲುವಾಗಿ ಠಾಣೆಗೆ ಕರೆಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಯಾವುದೇ ನೋಟೀಸ್ ನೀಡಿರಲಿಲ್ಲ ಮತ್ತು ಅವರ ಸಮಕ್ಷಮದಲ್ಲಿ ಯಾವುದೇ ಮಹಜರ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸಂಬಂಧಿತ ಸ್ಥಳವು ನಮ್ಮ ಠಾಣೆಯಿಂದ ಸುಮಾರು ಮುಕ್ಕಾಲು ಕಿಲೋಮೀಟರ್ ಅಂತರದಲ್ಲಿದೆ. 3ನೇ ಆರೋಪಿ ಸ್ಥಳದಲ್ಲಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಬೇರೆ ಪ್ರಕರಣಕ್ಕೆ ಸಂಬಂಧಿಸಿದ ಈ ಆರೋಪಿಗಳನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಅಂಶಕ್ಕೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.